ಇ) ಸಂಗ್ರಹಿಸಲಾಗಿರುವ ಹಣವನ್ನು ಯಾವ ಬಗೆಯಲ್ಲಿ ವೆಚ್ಚ ಮಾಡಲಾಗಿದೆ?

ಶ್ರೀ ಆರ್.ವಿ. ದೇಶ್‌ಪಾಂಡೆ (ಬೃಹತ್ ಹಾಗೂ ಮಧ್ಯಮ ಕೈಗಾರಿಕಾ ಸಚಿವರು):

ಅ) ಮಂಡ್ಯ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಗ್ರಾಮೀಣ ಭಾಗದಲ್ಲಿ ಹಾಯ್ದು ಹೋಗುವ ರಸ್ತೆಗಳಲ್ಲಿ ಓ.ಎಫ್.ಸಿ ಕೇಬಲ್ ಅಳವಡಿಸಲು ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆಯಾಗಲಿ, ಮಂಡ್ಯ ಜಿಲ್ಲಾಪಂಚಾಯತಿಯಾಗಲಿ ಯಾವ ಕಂಪನಿಗೂ ಪರವಾನಗಿ ನೀಡಿರುವುದಿಲ್ಲ. ಓ.ಎಫ್.ಸಿ. ಕೇಬಲ್ ಅಳವಡಿಸಲು ಯಾವುದೇ ಶುಲ್ಕವನ್ನು ವಿಧಿಸಿರುವುದಿಲ್ಲ, ಆದಾಗ್ಯೂ ಕಂಪನಿಗಳು ರಸ್ತೆಯನ್ನು ಪುನ: ಅದರ ಮೂಲ ಸ್ಥಿತಿಗೆ ತರುವುದನ್ನು ಖಾತರಿ ಪಡಿಸಿಕೊಳ್ಳಲು ಅವರಿಂದ ಪ್ರತಿ 1 ಮೀಟರ್‌ಗೆ 25.00 ರೂಗಳಂತೆ ಬ್ಯಾಂಕ್ ಗ್ಯಾರಂಟಿಯನ್ನು ತೆಗೆದುಕೊಳ್ಳಲಾಗುತ್ತದೆ.

ಆ) ಮತ್ತು ಇ) ಮೇಲಿನ ಉತ್ತರದ ದೃಷ್ಟಿಯಿಂದ ಇದಕ್ಕೆ ಉತ್ತರ ಉದ್ಭವಿಸುವುದಿಲ್ಲ.

ಮಂಡ್ಯ ಜಿಲ್ಲೆಯಲ್ಲಿರುವ ಪ್ರೌಢ ಶಾಲೆಗಳಲ್ಲಿನ ಶಿಕ್ಷಕರ ಖಾಲಿ ಹುದ್ದೆಗಳ ಭರ್ತಿ

920 (1248) ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ): ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ಜಿಲ್ಲೆಯಲ್ಲಿರುವ ಸರ್ಕಾರ ಪ್ರೌಢ ಶಾಲೆಗಳೆಷ್ಟು?

ಆ) ಈ ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಖಾಲಿ ಇರುವ ಶಿಕ್ಷಕರ ಹುದ್ದೆಗಳೆಷ್ಟು?

ಇ) ಈ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು.

ಪ್ರೊ.ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು):

ಅ) 147

ಆ) 193

ಇ) ಬಡ್ತಿ ನಿಯೋಜನೆ ಹಾಗೂ ನೇರ ನೇಮಕಾತಿ ಮೂಲಕ ಖಾಲಿರುವ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ. ಇದೊಂದು ಸತತವಾದ ಪ್ರಕ್ರಿಯೆಯಾಗಿದೆ.

ಸೇಡಂ ಕ್ಷೇತ್ರದಲ್ಲಿ ಪ್ರೌಢ ಶಾಲಾ ಶಿಕ್ಷಣ ಕಟ್ಟಡಗಳ ನಿರ್ಮಾಣ

921 (1575) ಶ್ರೀ ಬಸವಂತರೆಡ್ಡಿ ಮೊತಕಪಲ್ಲಿ (ಸೇಡಂ): ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯಲ್ಲಿ ಕಟ್ಟಡಗಳು ಇಲ್ಲದ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳ ಸಂಖ್ಯೆ ಎಷ್ಟು;

ಆ) ಇಲ್ಲಿಯವರೆಗೆ ಸಬಾರ್ಡ್‌ನಲ್ಲಿ ಮಂಡೂರಾಗಿರುವ ಕೋಣೆಗಳ ಸಂಖ್ಯೆ ಎಷ್ಟು; ಮತ್ತು ಬೇರೆ ಬೇರೆ ಯೋಜನೆಗಳಲ್ಲಿ ಮಂಜೂರಾಗಿರುವ ಕೋಣೆಗಳ ಸಂಖ್ಯೆ ಎಷ್ಟು; (ಪ್ರಾಥಮಿಕ ಹಾಗೂ ಪ್ರೌಢಶಾಲಾವಾರು ವಿವರ ನೀಡುವುದು)

ಇ) ಸರ್ಕಾರ ಪ್ರೌಢ ಶಾಲೆಗಳಿಗಾಗಿ ನಬಾರ್ಡ್‌ನಲ್ಲಿ ಇಲ್ಲಿಯವರೆಗೆ ಯಾವ ಯಾವ ತಾಲ್ಲೂಕುಗಳಲ್ಲಿ ನಿರ್ಮಾಣ ಕಾರ್ಯಕ್ರಮ ಕೈಗೆತ್ತಿಕೊಳ್ಳಲಾಗಿದೆ; (ಗ್ರಾಮವಾರು ತಾಲ್ಲೂಕುವಾರು ವಿವರ ನೀಡುವುದು).

ಈ) ಹಾಗಿಲ್ಲದಿದ್ದಲ್ಲಿ, ಈ ಪ್ರೌಢ ಶಾಲೆಗಳ ಕಟ್ಟಡ ನಿರ್ಮಾಣಕ್ಕಾಗಿ ಕ್ರಮ ಕೈಗೊಂಡು ಈ ಹಿಂದುಳಿದ ಪ್ರದೇಶದ ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಿಕೊಡಲಾಗುವುದೇ?

ಪ್ರೊ. ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು) :

ಅ) ಗುಲ್ಬರ್ಗಾ ಜಿಲ್ಲೆಯಲ್ಲಿ ಕಟ್ಟಡಗಳು ಇಲ್ಲದ ಪ್ರಾಥಮಿಕ ಶಾಲೆಗಳು 75, ಪ್ರೌಢಶಾಲೆಗಳು 53.

ಆ) ಇಲ್ಲಿಯವರೆಗೆ ನಬಾರ್ಡ್‌ನಲ್ಲಿ ಮತ್ತು ಬೇರೆ ಬೇರೆ ಯೋಜನೆಗಳಲ್ಲಿ ಮಂಜೂರಾಗಿರುವ ಕೋಣೆಗಳ ಸಂಖ್ಯೆಯ ವಿವರ ಈ ಕೆಳಗಿನಂತಿದೆ;

ಯೋಜನೆಗಳು	ಮಂಜೂರಾಗಿರುವ ಕೊಠಡಿಗಳು	
	ಪ್ರಾಥಮಿಕ ಶಾಲೆ	ಪ್ರೌಢಶಾಲೆ
ನಬಾರ್ಡ್	693	295
ನಗರ ಪಟ್ಟಣ ಪ್ರದೇಶಗಳ ಶಾಲೆಯಲ್ಲಿ	30	-
ಹನ್ನೊಂದನೆ ಹಣಕಾಸು ಯೋಜನೆ	64	-
ಪ್ರಧಾನ ಮಂತ್ರಿ ಗ್ರಾಮೋದಯ ಯೋಜನೆ	50	
ರಾಜ್ಯ ಮುಂದುವರೆದ ಯೋಜನೆ	-	15
ಹುಡ್ಕೋ ಯೋಜನೆ	-	236

ಇ) ಕಾರ್ಯಕ್ರಮದ ಬಗ್ಗೆ ಪ್ರೌಢ ಶಾಲೆಗಳಿಗಾಗಿ ನಬಾರ್ಡ್‌ನಲ್ಲಿ ಇಲ್ಲಿಯವರೆಗೆ ಯಾವಳ ತಾಲ್ಲೂಕುಗಳಲ್ಲಿಯೂ ನಿರ್ಮಾಣ ಕಾರ್ಯಕ್ರಮ ಕೈಗೆತ್ತಿಕೊಂಡಿರುವುದಿಲ್ಲ. ಆದುದರಿಂದ ಗ್ರಾಮವಾರು ತಾಲ್ಲೂಕುವಾರು ವಿವರ ನೀಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಹಿಂದುಳಿದ ಪ್ರದೇಶ ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಿಕೊಡುವ ಸದುದ್ದೇಶದಿಂದ ಮುಂಬರುವ ವರ್ಷಗಳಲ್ಲಿ ಸರ್ಕಾರದಿಂದ ಕಾಲಕಾಲಕ್ಕೆ ಬಿಡುಗಡೆಯಾಗುವ ಅನುದಾನವನ್ನಾಧರಿಸಿ ಪ್ರೌಢಶಾಲಾಕಟ್ಟಡ/ಕೊಠಡಿಗಳ ಕೊರತೆಯನ್ನು ನೀಗಿಸಲು ಕ್ರಮ ಕೈಗೊಳ್ಳಲಾಗುವುದು.

ಗುಲ್ಬರ್ಗಾ ಜಿಲ್ಲೆಯ ಜಿಲ್ಲಾ ಪಂಚಾಯತ್ ರಸ್ತೆಗಳ ವಿಶೇಷ ದುರಸ್ತಿಗಾಗಿ ಹಣ

922 (1579) ಶ್ರೀ ಬಸವಂತರೆಡ್ಡಿ ಮೊತಕಪಲ್ಲಿ (ಸೇಡಂ): ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ಕ್ಷೇತ್ರದ ಚಿತ್ತಾಪೂರ ತಾಲ್ಲೂಕಿನ ಭೀಮನಹಳ್ಳಿ ತಾಂಡದಲ್ಲಿ ಡಿ.ಪಿ.ಇ.ಪಿ, ಯೋಜನೆಯಡಿ ಶಾಲಾ ಕಟ್ಟಡವು ಮಂಜೂರಾಗಿ ಕೆಲಸ ಪೂರ್ಣಗೊಂಡು ಶಿಕ್ಷಣ ಇಲಾಖೆಗೆ ಹತ್ತಾಂತರಿಸಿರುವುದು ನಿಜವಲ್ಲವೇ;

ಆ) ಡಿ.ಪಿ.ಇ.ಪಿ. ಯೋಜನೆಯಡಿಯಲ್ಲಿ ಈ ಶಾಲಾ ಕಟ್ಟಡಕ್ಕೆ ಮಂಜೂರಾಗಿರುವ ಹಣ ಎಷ್ಟು; ಈ ಹಣದಲ್ಲಿ ಖರ್ಚಾಗಿರುವ ಹಣ ಎಷ್ಟು;

ಇ) ಸ್ಥಳೀಯ ಪ್ರತಿನಿಧಿಗಳು ಕಟ್ಟಡ ಕಟ್ಟಲು ಕೂಲಿಕಾರರನ್ನು ಕರೆದುಕೊಂಡು ಬಂದು ಕೆಲಸ ಮಾಡಿಸಿದ ಹಣ ಪೂರ್ತಿ ವಿತರಣೆ ಮಾಡಲಾಗಿದೆಯೆ; ಮಾಡಿಲ್ಲವೆಂದರೆ ಕಾರಣಗಳೇನು; ಮಾಡುವುದು ಯಾವಾಗ?

ಪ್ರೊ. ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು) :

ಅ) ಹೌದು ನಿಜ.